ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ. ಧಾರವಾಡ

## ಸಿ.ಸಿ.ನಂಃ 4624/2022

**ಫಿರ್ಯಾದಿದಾರರು** ಃ ಕರ್ನಾಟಕ ಸರಕಾರ,
ಪೊಲೀಸ ಸಬ್ ಇನ್ಸಪೆಕ್ಟರ,
ಉಪನಗರ ಪೋಲಿಸ ಠಾಣೆ ಧಾರವಾಡ.

**ವಿರುದ್ಧ**

ಆರೋಪಿತರು ಃ

1. ಮಲ್ಲಿಕಾರ್ಜುನ ಮಹಾದೇವಪ್ಪ ಹೊರಟ್ಟಿ
ವಯಾಃ 41 ವರ್ಷ, ಉಃ ವ್ಯವಸಾಯ,
ಸಾಃ ಧಾರವಾಡ. (ಪೋತಿ)

3. ಮಹಾಂತೇಶ ಮಹಾದೇವಪ್ಪ ಹೊರಟ್ಟಿ
ವಯಾಃ 30 ವರ್ಷ, ಉಃ ವ್ಯವಸಾಯ,
ಸಾಃ ಮುರಾಘಮಠ ಹತ್ತಿರ, ಧಾರವಾಡ.

4. ಶ್ರೀಮತಿ ವೀಣಾ ಚನ್ನಬಸಪ್ಪ ಹೊರಟ್ಟಿ
ವಯಾಃ 28 ವರ್ಷ, ಉಃ ಮನೆಗೆಲಸ,
ಸಾಃ ಮುರಾಘಮಠ ಹತ್ತಿರ ಧಾರವಾಡ.

5. ಶ್ರೀಮತಿ ಸಂಗೀತಾ ಮಲ್ಲಿಕಾರ್ಜುನ ಹೊರಟ್ಟಿ
ವಯಾಃ 28 ವರ್ಷ, ಉಃ ಮನೆಗೆಲಸ,
ಸಾಃ ಮುರಾಘಮಠ ಹತ್ತಿರ ಧಾರವಾಡ.

## ದೋಷಾರೋಪಣೆ

ಅವಿನಾಶ್ ಎಂ. ಘಾಳಿ, ಬಿ.ಎ. ಎಲ್.ಎಲ್.ಬಿ., ಪ್ರಧಾನ ದಿವಾಣಿ ಮತ್ತು ಪ್ರಧಾನ ಜೆ.ಎಂ.ಎಫ್.ಸಿ ನ್ಯಾಯಾಧೀಶರು ಧಾರವಾಡ, ಆದ ನಾನು

ಇವರ ಮೇಲೆ ಕೆಳಕಂಡಂತೆ ದೋಷಾರೋಪಣೆ ಮಾಡುವುದೇನೆಂದರೆಃ

ಫಿರ್ಯಾಧಿದಾರರು ಹಾಗೂ ಆರೋಪಿತರಾದ ನೀವು ಸಂಬಂಧಿಕರಿಂದು ನಿಮ್ಮ ನಡುವೆ ಪರಸ್ಪರ ಆಸ್ತಿ

ವ್ಯಾಜ್ಯಗಳು ಇರುತ್ತವೆ**.** ಧಾರವಾಡ ಉಪನಗರ ಪೊಲೀಸ ಠಾಣೆಯ ಹದ್ದಿಯ ಧಾರವಾಡ ತಹಶಿಲ್ದಾರ ಕಛೇರಿಯ ಎದುರಿಗೆ ಸಾರ್ವಜನಿಕ ರಸ್ತೆಯಲ್ಲಿ ದಿನಾಂಕಃ**07-03-2022** ರಂದು **11-15** ಘಂಟೆ ಸುಮಾರಿಗೆ ಫಿರ್ಯಾದಿದಾರರು ಚಾಸಾ**.2** ಮತ್ತು **3** ರವರ ಜೊತೆ ಆಸ್ತಿಯ ವಿಷಯವಾಗಿ ಮಾತನಾಡುತ್ತಾ ನಿಂತಿರುವಾಗ ಪೋತಿ **01** ನೇ ಆರೋಪಿತನು ಪಿರ್ಯಾದಿದಾರರಿಗೆ ಅವಾಚ್ಯವಾಗಿ ಬೈದಾಡಿ**,** ಅವರನ್ನು ಗಟ್ಟಿಯಾಗಿ ಹಿಡಿದುಕೊಂಡು ಮುಂದಕ್ಕೆ ಹೋಗದಂತೆ ತಡೆದು ಆ ಮೂಲಕ ಭಾ.ದಂ.ಸಂ. ಕಲಂ. 341 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

2 ನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸದರಿ ವಿಷಯವಾಗಿ ಸಮಾನ ಉದ್ದೇಶವನ್ನು ಮುಂದುವರೆಸುತ್ತಾ ಪಿರ್ಯಾದಿದಾರರರಿಗೆ ಪೋತಿ 01 ನೇ ಆರೋಪಿ ಹಾಗೂ 3 ರಿಂದ 5 ನೇ ಆರೋಪಿತರಾದ ನೀವು ಪಿರ್ಯಾದಿದಾರರಿಗೆ ಅವಾಚ್ಯ ಶಬ್ದಗಳಿಂದ ಬೈದು ಇದರಿಂದ ಅವರಿಗೆ ಅವಮಾನವಾಗಿ ಅವರು ಪ್ರಚೋದನೆಗೊಳ್ಳುತ್ತಾರೆಂದು ತಿಳಿದು ಈ ರೀತಿ ಬೈದು ಭಾ.ದಂ.ಸಂ. ಕಲಂ. 504 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

3 ನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸದರಿ ವಿಷಯವಾಗಿ ಸಮಾನ ಉದ್ದೇಶವನ್ನು ಮುಂದುವರೆಸುತ್ತಾ 3 ರಿಂದ 5 ನೇ ಆರೋಪಿತರಾದ ನೀವು ಪಿರ್ಯಾದಿದಾರರಿಗೆ ಕೈಯಿಂದ ಏಳೆದಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟುಮಾಡಿ ಭಾ.ದಂ.ಸಂ. ಕಲಂ. 323 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

4 ನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸದರಿ ವಿಷಯವಾಗಿ ಸಮಾನ ಉದ್ದೇಶವನ್ನು ಮುಂದುವರೆಸುತ್ತಾ ನಿಮ್ಮ ಪೈಕಿ 4 ಮತ್ತು 5 ನೇ ಆರೋಪಿತರಾದ ನೀವು ಚಪ್ಪಲಿಗಳಿಂದ ಪಿರ್ಯಾದಿದಾರರ ಮೈಕೈಗೆ ಹೊಡೆದು ಅವಮಾನಿಸುವ ಉದ್ದೇಶದಿಂದ ಹಲ್ಲೆ ಮಾಡಿ ಆ ಮೂಲಕ ನೀವು ಭಾ.ದಂ.ಸಂ. ಕಲಂ. 355 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸದರಿ ವಿಷಯವಾಗಿ ಸಮಾನ ಉದ್ದೇಶವನ್ನು ಮುಂದುವರೆಸುತ್ತಾ ನಿಮ್ಮ ಪೈಕಿ 4 ಮತ್ತು 5ನೇ ಆರೋಪಿತರಾದ ನೀವು ಚಪ್ಪಲಿಗಳಿಂದ ಫಿರ್ಯಾದಿದಾರರ ಮೈಕೈಗೆ ಹೊಡೆದು ಆ ಮೂಲಕ ನೀವು ಭಾ.ದಂ.ಸಂ. ಕಲಂ. 324 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ದೋಷಾರೋಪಣೆಯನ್ನು ನಿಮ್ಮ ಮೇಲೆ ಮಾಡಲು ನಾನು ಬದ್ಧನಾಗಿರುತ್ತೇನೆ.

ದಿನಾಂಕ ಃ 20-08-2025

(ಅವಿನಾಶ್ ಎಂ. ಘಾಳಿ)
ಪ್ರ.ದ. ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ., ಧಾರವಾಡ.